# ಬುನಾದಿ ಹಂತಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಓದುವಿಕೆ

ರಾಮಚಂದರ್ ಕೃಷ್ಣಮೂರ್ತಿ

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT) 2022ರ ಅಕ್ಟೋಬರ್ ತಿಂಗಳಲ್ಲಿ ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು (NCF-FS) ಬಿಡುಗಡೆ ಮಾಡಿತು. ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ರಾಷ್ಟ್ರೀಯ ಶಿಕ್ಷಣ ನೀತಿಯ (2020) ಅನುಷ್ಠಾನಕ್ಕಾಗಿ ಹಮ್ಮಿಕೊಂಡಿರುವ ಪಠ್ಯಕ್ರಮ ಚೌಕಟ್ಟಿನ ನಾಲ್ಕು ದಾಖಲೆಗಳಲ್ಲಿ ಇದು ಮತ್ತು ಆಗಸ್ಟ್ 2023ರಲ್ಲಿ ಬಿಡುಗಡೆಯಾದ ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF-SE) ದಾಖಲೆಗಳು ಎರಡಾಗಿವೆ. ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಸ್ಫುಟವಾಗಿ ವ್ಯಕ್ತವಾಗಿರುವ ಶೈಕ್ಷಣಿಕ ಕಾಣ್ಕೆಯನ್ನು ಸಾಧಿಸಲು ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಅಭಿವೃದ್ಧಿಗೊಳಿಸಲಾಗಿದೆ. ಶಿಕ್ಷಣ ನೀತಿಯು ಆರಂಭಿಕ ಬಾಲ್ಯದ ಹಂತವಾದ 3ರಿಂದ 8ವರ್ಷಗಳ ನಿರ್ಣಾಯಕ ಹಂತಕ್ಕೆ ಪ್ರಾಧಾನ್ಯ ನೀಡುತ್ತದೆ.

ಪಠ್ಯಕ್ರಮ ದಾಖಲೆಯ ಕರಡು ಸಮಿತಿಯು ಅಳವಡಿಸಿಕೊಂಡಿರುವ ಮುಖ್ಯ ಲಕ್ಷಣಗಳನ್ನು ಹಾಗೂ ವಿನ್ಯಾಸ ತತ್ತ್ವಗಳನ್ನು ಎತ್ತಿತೋರುವ ಮೂಲಕ ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಓದುಗರಿಗೆ ಪರಿಚಯಿಸುವ ಉದ್ದೇಶವನ್ನು ಈ ಲೇಖನ ಹೊಂದಿದೆ. ಮಕ್ಕಳ ಬೆಳವಣಿಗೆಗೆ ವಿಭಿನ್ನ ಕ್ಷೇತ್ರಗಳಲ್ಲಿ ಕಲಿಕಾ–ಮಾನದಂಡಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುವುದು ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಒಂದು ಗಮನಾರ್ಹ ಕೊಡುಗೆಯಾಗಿದೆ. ಈ ಲೇಖನವು ಕಲಿಕಾ–ಮಾನದಂಡಗಳ ಅಗತ್ಯ ಹಾಗೂ ಪ್ರಸ್ತುತತೆಯನ್ನು ಅನ್ವೇಷಿಸುವುದರ ಜೊತೆಗೆ ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಸಂರಚನೆಯನ್ನು ವಿವರಿಸುವ ಕೆಲಸವನ್ನು ಕೈಗೆತ್ತಿಕೊಳ್ಳುತ್ತದೆ. ಓದುಗರಿಗೆ ಇದೊಂದು ಮಾರ್ಗದರ್ಶಿಯಾಗಿ ಕೆಲಸ ಮಾಡಲೆಂಬುದು ನಮ್ಮ ಆಶಯವಾಗಿದೆ.

## ಬುನಾದಿ ಹಂತ - ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2022ರ ಮುಖ್ಯ ಅಂಶಗಳು

ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2022 ಎಂಬುದು 360 ಪುಟಗಳ ಸುದೀರ್ಘ ದಾಖಲೆಯಾಗಿದ್ದು, 3ರಿಂದ 8 ವರ್ಷ ವಯೋಮಾನದ ಮಕ್ಕಳಿಗಾಗಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು (ECCE) ಸಾರಲು ಸಮಗ್ರವಾದ ವಿಧಾನವೊಂದರ ಕನಸನ್ನು ನಮ್ಮೆದುರು ಇಡುತ್ತದೆ. ಇದರ ಸಮಗ್ರತಾ ದೃಷ್ಟಿಯ ಪಠ್ಯಕ್ರಮವು ಸಕಾರಾತ್ಮಕ ಕಲಿಕಾ–ಅಭ್ಯಾಸಗಳನ್ನು ಒಳಗೊಂಡಿದ್ದು, ಬೆಳವಣಿಗೆಯ ಎಲ್ಲ ಪ್ರಸ್ತುತ ಕ್ಷೇತ್ರಗಳನ್ನೂ – ದೈಹಿಕ, ಸಾಮಾಜಿಕ–ಭಾವನಾತ್ಮಕ ಹಾಗೂ ನೈತಿಕ, ಭಾಷೆ ಮತ್ತು ಭಾಷಾಶಾಸ್ತ್ರ ಸಂಬಂಧಿತ, ಬೌದ್ಧಿಕ, ಸೌಂದರ್ಯೋಪಾಸನೆ ಮತ್ತು ಸಂಸ್ಕೃತಿ ಸಂಬಂಧಿತ ಕ್ಷೇತ್ರಗಳನ್ನು ಒಳಗೊಂಡಂತೆ ವ್ಯಾಪಿಸಿದೆ. ಪ್ರಾಚೀನ ಭಾರತೀಯ ಪಂಚಕೋಶ ಜ್ಞಾನ ಹಾಗೂ ಮಗುವಿನ ಬೆಳವಣಿಗೆಯನ್ನು ಕುರಿತು ನಮಗೆ ಲಭ್ಯವಿರುವ ಆಧುನಿಕ ವೈಜ್ಞಾನಿಕ ತಿಳುವಳಿಕೆಯ ಆಧಾರದ ಮೇಲೆ ಬೆಳವಣಿಗೆಯ ಈ ಕ್ಷೇತ್ರಗಳನ್ನು ಗುರುತಿಸಲಾಗಿದೆ.

ಈ ಹಿಂದೆಯೇ ಹೇಳಿರುವಂತೆ, ಈ ಪಠ್ಯಕ್ರಮ ಚೌಕಟ್ಟು ನಿರ್ದಿಷ್ಟ ಕಲಿಕಾ–ಮಾನದಂಡಗಳ ವ್ಯಾಖ್ಯೆಯನ್ನು ನೀಡುವುದಲ್ಲದೆ, ಇವನ್ನು ಪಠ್ಯಕ್ರಮ ಧ್ಯೇಯಗಳು, ಸಾಮರ್ಥ್ಯಗಳು ಹಾಗೂ ಕಲಿಕಾ–ಫಲಿತಾಂಶಗಳಾಗಿ ಸ್ಫುಟವಾಗಿ ಅಭಿವ್ಯಕ್ತಿಸುತ್ತದೆ. ಪ್ರಸ್ತುತ ಲೇಖನದಲ್ಲಿ ನಾವು ಈ ಎಲ್ಲವನ್ನು ಇನ್ನೂ ವಿಸ್ತಾರವಾಗಿ ಅನ್ವೇಷಿಸಲಿದ್ದೇವೆ.

ಕಲಿಕಾ–ಮಾನದಂಡಗಳು ಅಪೇಕ್ಷಿತ ಶೈಕ್ಷಣಿಕ ಸಾಧನೆಗಳು ಯಾವುವು ಎಂಬುದನ್ನು ನಿರೂಪಿಸಿದರೆ, ಈ ದಾಖಲೆಯು ಇವನ್ನು ಸಾಧಿಸುವುದು ಹೇಗೆ ಎಂಬ ವಿಷಯವಾಗಿ ನಿರ್ದಿಷ್ಟ ಹಾಗೂ ವಿವರವಾದ ಮಾರ್ಗದರ್ಶನ ಸೂತ್ರಗಳನ್ನು ನೀಡುತ್ತದೆ. ಬೋಧನಶೈಲಿಯ ವಿಧಾನಗಳು, ಕಲಿಕಾ–ವಾತಾವರಣವನ್ನು ಸಂಯೋಜಿಸುವ ರೀತಿಗಳು, ಪಠ್ಯವಿಷಯದ ಆಯ್ಕೆಗಾಗಿ ಇರುವ ತತ್ತ್ವಗಳು ಹಾಗೂ ಈ ಹಂತದ ಕಲಿಕೆಯ ಮೌಲ್ಯಮಾಪನವನ್ನು ಮಾಡಲು ಇರುವ ಸೂಕ್ತ ವಿಧಾನಗಳನ್ನು ವಿವರವಾಗಿ ಈ ದಾಖಲೆಯು ತಿಳಿಸಿಕೊಡುತ್ತದೆ. ಮುಂದುವರಿದು, ವಾರದ ಮತ್ತು ದೈನಂದಿನ ವೇಳಾಪಟ್ಟಿಗಳನ್ನು ನೀಡುವ ಮೂಲಕ ಈ ದಾಖಲೆಯು ಶಾಲಾ ಸಮಯವನ್ನು ಸಂಯೋಜಿಸುವ ವಿಧಾನಗಳ ರೂಪುರೇಖೆಗಳನ್ನು ನೀಡುತ್ತದೆ.

ಬುನಾದಿಯ ಹಂತದಲ್ಲಿ, ಕಡಿಮೆ ಎಂದರೂ ಎರಡು ಭಾಷೆಗಳಲ್ಲಿ, ಸಾಕ್ಷರತೆಯನ್ನು ಅಭಿವೃದ್ಧಿಪಡಿಸುವ ವಿಧಾನವನ್ನು ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಇದು ಪದವನ್ನು ಗುರುತಿಸುವುದಕ್ಕೆ ಹಾಗೂ ಪದಗಳನ್ನು ಬರೆಯುವಲ್ಲಿ ನಿಖರತೆ ತೋರುವುದಕ್ಕೆ (ನಿಮ್ನ ಸ್ತರದ ಕೌಶಲಗಳು) ಹಾಗೂ ಭಾಷಾಗ್ರಹಣ ಮತ್ತು ಅಭಿವ್ಯಕ್ತಿಗೆ (ಉನ್ನತ ಸ್ತರದ ಕೌಶಲಗಳು) ಸಮಾನ ಪ್ರಾಧಾನ್ಯ ನೀಡುವ ಮೂಲಕ ಸಾಕ್ಷರತೆಯ ವಿಷಯದಲ್ಲಿ ಒಂದು ಸಮತೋಲಿತ ವಿಧಾನವನ್ನು ಶಿಫಾರಸು ಮಾಡುತ್ತದೆ. ಮೌಖಿಕ ಭಾಷೆಯ ಬೆಳವಣಿಗೆ, ಪದ

ಗುರುತಿಸುವಿಕೆ, ಓದುವುದು ಹಾಗೂ ಬರವಣಿಗೆಗಳ ಸಮಸ್ಯೆಗಳೆಲ್ಲದರೊಂದಿಗೂ ಏಕಕಾಲಕ್ಕೆ ಮುಖಾ–ಮುಖಿಯಾಗುವ ಸಾಕ್ಷರತಾ–ಬೋಧನ ಶೈಲಿಯ ನಾಲ್ಕು ಶ್ರೇಣಿ[ii] ಮಾದರಿಯು ಬುನಾದಿ ಸಾಕ್ಷರತೆಯನ್ನು ಸಾಧಿಸುವ ಸಾಧನವಾಗಿದೆ.

ಬುನಾದಿ ಸಂಖ್ಯಾಜ್ಞಾನವು ಅಕ್ಷರದ ಜೊತೆಸೇರಿ, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (FLN) ಎಂದಾಗುತ್ತದೆ. ಇದಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ವಿಶೇಷ ಪ್ರಾಧಾನ್ಯ ನೀಡಲಾಗಿದೆ. ಮತ್ತೇನೆಂದರೆ, ಪರಿಕಲ್ಪನಾತ್ಮಕ ಗ್ರಹಿಸುವಿಕೆಗೆ ಹಾಗೂ ಕೌಶಲಗಳನ್ನು ಅಭ್ಯಾಸ ಮಾಡುವುದೆರಡಕ್ಕೂ ಸಮಾನವಾದ ಒತ್ತು ನೀಡಿ, ಸಂಖ್ಯಾಜ್ಞಾನವನ್ನು ಅಭಿವೃದ್ಧಿಪಡಿಸಲು ಶಿಫಾರಸು ಮಾಡುವ ಬೋಧನಶೈಲಿಯ ಸಮತೋಲನವನ್ನು ಮತ್ತೊಮ್ಮೆ ಕಾಯ್ದುಕೊಳ್ಳಲಾಗಿದೆ. ಗಣಿತ ಬೋಧನೆಯಲ್ಲಿ ನಾಲ್ಕು ಶ್ರೇಣಿಗಳು[iii] ಸಮಸ್ಯೆಗಳನ್ನು ಪರಿಹರಿಸುವುದನ್ನು ಪ್ರೋತ್ಸಾಹಿಸಲು ಮೌಖಿಕ ಗಣಿತ ಕುರಿತ ಮಾತುಕಥೆ, ಕೌಶಲಗಳ ಬೋಧನೆ, ಕೌಶಲಗಳ ಅಭ್ಯಾಸ ಮತ್ತು ಗಣಿತಕ್ಕೆ ಸಂಬಂಧಿಸಿದ ಆಟಗಳನ್ನು ಒಳಗೊಂಡಿದೆ.

## ಬುನಾದಿ ಹಂತ - ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಕರಡನ್ನು ರಚಿಸುವಲ್ಲಿ ಅಳವಡಿಸಿಕೊಳ್ಳಲಾದ ವಿನ್ಯಾಸ ತತ್ತ್ವಗಳು

ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಲೇಖಕರು ಈ ಕರಡನ್ನು ಸಿದ್ಧಪಡಿಸುವಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲವು ತತ್ತ್ವಗಳನ್ನು ಅಳವಡಿಸಿಕೊಂಡಿದ್ದಾರೆ. ಈ ದಾಖಲೆಯ ಓದುಗರು ಇಲ್ಲಿನ ತತ್ತ್ವಗಳ ಹಿಂದಿನ ತಾರ್ಕಿಕತೆ ಹಾಗೂ ಲೇಖಕರ ರಚನಾತ್ಮಕ ಆಯ್ಕೆಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗುತ್ತದೆ.

### ವೃತ್ತಿನಿರತರಿಗೆ ಮಾರ್ಗದರ್ಶನ

ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸ್ಪಷ್ಟವಾಗಿ ವೃತ್ತಿನಿರತರನ್ನು, ಅಂದರೆ ಶಾಲಾ ಶಿಕ್ಷಕರನ್ನು, ಉದ್ದೇಶಿಸಿ ರಚಿಸಲ್ಪಟ್ಟಿದೆ. ಪಠ್ಯಕ್ರಮ ಚೌಕಟ್ಟಿನ ವಿಷಯಗಳನ್ನು ಆದರ್ಶಪ್ರಾಯ ಹಾಗೂ ಅಮೂರ್ತ ಪಾರಿಭಾಷಿಕ ಪದಗಳಲ್ಲಿ ವ್ಯಕ್ತಪಡಿಸುವ ಪ್ರವೃತ್ತಿಯಿದ್ದು, ಇದರಿಂದ ವೃತ್ತಿಗಾರರು ದೈನಂದಿನ ಅಭ್ಯಾಸಕ್ಕಾಗಿ ಅದರ ಮೊರೆಹೋಗುವುದು ಕಷ್ಟಕರವಾಗುತ್ತದೆ. ಹೀಗಾಗಿ, ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ತಾಂತ್ರಿಕ ಹಾಗೂ ವಿದ್ವತ್ಪೂರ್ಣ ಭಾಷೆಯ ಬಳಕೆಯು ಪ್ರಜ್ಞಾಪೂರ್ವಕವಾಗಿ ಕಡಿಮೆಯಾಗಿದೆ.

ಈ ದಾಖಲೆಯು ಅಮೂರ್ತ ತತ್ತ್ವಗಳು ಮತ್ತು ಪರಿಹಾರಗಳ ಸ್ತರದಲ್ಲಿ ಇರದೆ, ಈ ತತ್ತ್ವಗಳು ಹೆಚ್ಚು ಮೂರ್ತರೂಪದಲ್ಲಿ ತೆರೆದುಕೊಳ್ಳಲು ನೈಜ ತರಗತಿಗಳಿಂದ ಹಿಡಿದು, ಶಿಕ್ಷಕರ ದನಿಗಳಿಂದ ಆರಿಸಿಕೊಂಡ ನಿರ್ದಿಷ್ಟ ಉದಾಹರಣೆಗಳನ್ನು, ವರ್ಣನಾತ್ಮಕ ಚಿತ್ರಗಳನ್ನು ನಮ್ಮೆದುರು ಪ್ರಸ್ತುತಪಡಿಸುತ್ತದೆ. ಇಲ್ಲಿನ ಮಾರ್ಗದರ್ಶಿ ಸೂತ್ರಗಳು ಹಾಗೂ ಶಿಫಾರಸುಗಳೊಂದಿಗೆ ವೃತ್ತಿನಿರತರು ಹೊಂದಾಣಿಕೆ ಕಂಡುಕೊಳ್ಳಲು ಹಾಗೂ ಅವುಗಳು ವೃತ್ತಿನಿರತರಿಗೆ ಸುಲಭವಾಗಿ ದಕ್ಕುವಂತಾಗಲು ಈ ಉದಾಹರಣೆಗಳು ನೆರವಾಗುತ್ತವೆ ಎಂಬ ಆಶಯದೊಂದಿಗೆ ಇದನ್ನು ಮಾಡಲಾಗಿದೆ. ಓದಲು ಇದೊಂದು ಸುದೀರ್ಘ ದಾಖಲೆಯಂತೆ ಕಂಡರೂ, ಹೆಚ್ಚು ಪ್ರಸ್ತುತವೂ, ಪರಿಣಾಮಕಾರಿಯೂ ಆಗಿದೆ.

### ನಿರ್ದಿಷ್ಟ ಲಕ್ಷಣ

ವೃತ್ತಿನಿರತರಿಗೆ ಪ್ರಸ್ತುತವೆನಿಸಲು ಈ ರೀತಿಯ ದಾಖಲೆಯು ನಿರ್ದಿಷ್ಟತೆಯನ್ನು ಕಾಯ್ದುಕೊಂಡು, ವಾಸ್ತವತೆಯೊಂದಿಗಿನ ಕೊಂಡಿಯನ್ನು ಕಳಚಿಕೊಳ್ಳದಂತೆ ಇರಬೇಕಾಗುತ್ತದೆ. ಶೈಕ್ಷಣಿಕ ವಿಚಾರವನ್ನು ಕುರಿತು ಯಾವುದು ನಿಷ್ಕೃಷ್ಟವಾದದ್ದು ಹಾಗೂ ಯಾವುದು ವಿಧಾಯಕರೂಪದ್ದು ಎಂಬುದರ ವಿಷಯವಾಗಿ ಶೈಕ್ಷಣಿಕ ವಲಯಗಳಲ್ಲಿ ಹಲವೊಮ್ಮೆ ಗೊಂದಲ ಮೂಡುತ್ತದೆ. ನಿಷ್ಕೃಷ್ಟವಾಗಿ ಇರುವುದು ಶಿಕ್ಷಕರಿಗೆ ಪ್ರಯೋಜನಕಾರಿಯೆಂದೂ, ಅವರಿಗೆ ತಮ್ಮ ಕೆಲಸದಲ್ಲಿ ಮಾರ್ಗದರ್ಶನ ಮಾಡಲು ನೆರವಾಗುತ್ತದೆಯೇ ಹೊರತು, ಇಂಥದೇ ಅಭ್ಯಾಸಗಳನ್ನು ಅವರು ರೂಢಿಸಿಕೊಳ್ಳಬೇಕು ಎಂದು ವಿಧಿಸಲು ಹೋಗುವುದಿಲ್ಲ ಎಂಬುದು ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಧೋರಣೆಯಾಗಿದೆ. ಶಿಕ್ಷಕರು ತಮ್ಮದೇ ಸಂದರ್ಭಗಳಿಗೆ ಅನುಗುಣವಾಗಿ ತಮ್ಮ ಆಚರಣೆಗಳನ್ನು ಅಳವಡಿಸಿಕೊಳ್ಳುವ ಸ್ವಾಯತ್ತತೆಯನ್ನು ಸದಾ ಹೊಂದಿದ್ದು, ಮುಂದೆಯೂ ಸಹ ಹೊಂದಿರಬೇಕು.

### ವ್ಯಾವಹಾರಿಕ ಪ್ರವೃತ್ತಿ

ಪಠ್ಯಕ್ರಮ ಚೌಕಟ್ಟೊಂದನ್ನು ಹುಟ್ಟುಹಾಕುವ ಪರಿಶ್ರಮವು ಆಶಾವಾದ ಮತ್ತು ಆದರ್ಶವಾದಗಳಿಂದ ಪ್ರೇರಿತವಾಗಿರುತ್ತದೆ. ಅದು ಶಾಲಾಶಿಕ್ಷಣವನ್ನು ಸುಧಾರಿಸುವ ಗುರಿ ಹೊಂದಿರುತ್ತದೆ. ಆದಾಗ್ಯೂ, ಈ ಗುರಿಗಳನ್ನು ಸಾಧಿಸುವುದು ಸಂಭಾವ್ಯವೂ, ಸಾಧ್ಯವೂ ಆಗಿದ್ದಲ್ಲಿ, ಸೂಚನೆಗಳು ಹಾಗೂ ಶಿಫಾರಸುಗಳು ನಿಷ್ಕೃಷ್ಟವಾಗಿ ಇರುವುದಷ್ಟೇ ಸಾಲದೆ, ಸದ್ಯದ ವಾಸ್ತವಿಕತೆ ಮತ್ತು ವ್ಯವಹಾರ್ಯತೆಗಳಿಂದ ಹೊರಹೊಮ್ಮುವುದು ಸಹ ಅಗತ್ಯವಾಗುತ್ತದೆ. ಒಂದು ರೀತಿಯಲ್ಲಿ, ಪಠ್ಯಕ್ರಮ ಚೌಕಟ್ಟುಗಳು ಶಾಲಾಶಿಕ್ಷಣದಲ್ಲಿ ಬದಲಾವಣೆಯನ್ನು ತರುವ ಮೂಲಕ ಸಾಮಾಜಿಕ ಬದಲಾವಣೆಯನ್ನು ಗುರಿಯಾಗಿ ಇರಿಸಿಕೊಳ್ಳುತ್ತವೆ. ಪಠ್ಯಕ್ರಮ ಚೌಕಟ್ಟುಗಳು ಸೂಚಿಸುವ ಬದಲಾವಣೆಗಳು ಅನುಷ್ಠಾನಯೋಗ್ಯವಾಗಲು ಅವು ಭಾರಿ ಜಿಗಿತಗಳ ಗತಿಯನ್ನು ತೊರೆದು, ಕೊಂಚ–ಕೊಂಚವಾಗಿ, ಹಂತ–ಹಂತವಾಗಿ ಮುಂದೆ ಸಾಗಬೇಕಾಗುತ್ತದೆ.

| | |
|---|---|
| ಬೆಳವಣಿಗೆಯ ಕ್ಷೇತ್ರ | ಭಾಷೆ ಹಾಗೂ ಸಾಕ್ಷರತೆಗಳ ಬೆಳವಣಿಗೆ |
| ಪಠ್ಯಕ್ರಮದ ಧ್ಯೇಯಗಳು | CG-10: ಮಕ್ಕಳು ಭಾಷೆಯೊಂದರಲ್ಲಿ ಓದಲು ಹಾಗೂ ಬರೆಯಲು ಬೇಕಿರುವ ನಿರರ್ಗಳತೆಯನ್ನು ಬೆಳೆಸಿಕೊಳ್ಳುತ್ತಾರೆ |
| ಸಾಮರ್ಥ್ಯ | 1 C-10.5: ಸಣ್ಣ ಕಥೆಗಳನ್ನು ಓದಿ, ಪಾತ್ರಗಳನ್ನು, ಕಥಾ-ಹಂದರ ಹಾಗೂ ಲೇಖಕರು ಏನನ್ನು ಹೇಳಬೇಕಿದ್ದಾರೆ ಎಂಬುದನ್ನು ತಮ್ಮಷ್ಟಕ್ಕೆ ತಾವೇ ಗುರುತಿಸುವ ಮೂಲಕ ಅರ್ಥವನ್ನು ಗ್ರಹಿಸುತ್ತಾರೆ. |

ಕಲಿಕಾ-ಫಲಿತಾಂಶಗಳು

← ವಯೋಮಾನ 3 – 8 →

| | | | | |
|---|---|---|---|---|
| ಚಿತ್ರಸಹಿತ ಪುಸ್ತಕಗಳನ್ನು ಓದುತ್ತಾರೆ ಮತ್ತು ವಸ್ತುಗಳನ್ನು ಮತ್ತು ಕ್ರಿಯೆಗಳನ್ನು ಗುರುತಿಸುತ್ತಾರೆ | ಸಚಿತ್ರ ಪುಸ್ತಕಗಳನ್ನು ಓದುತ್ತಾರೆ ಮತ್ತು ಪಾತ್ರಗಳನ್ನು ಹಾಗೂ ಕಥಾ-ಹಂದರವನ್ನು ಗುರುತಿಸು-ತ್ತಾರಲ್ಲದೆ, ಕಥೆಯನ್ನು ಸಣ್ಣದಾಗಿ, ಕ್ರಮಬದ್ಧವಾಗಿ ನಿರೂಪಿಸುತ್ತಾರೆ. | ಚಿಕ್ಕ ಸರಳ ಪಠ್ಯಗಳಿರುವ ಪುಸ್ತಕಗಳನ್ನು ಗಟ್ಟಿಯಾಗಿ ಓದುತ್ತಾರೆ. ಕಥಾ-ಸರಣಿಯನ್ನು ಊಹಿಸಿ, ಕರಾರುವಾಕ್ಕಾಗಿ, ವಿವರವಾಗಿ ಪುನಃ ನಿರೂಪಿಸಲು ದೃಷ್ಟಿಗೋಚರ ಸೂಚನೆಗಳು ಹಾಗೂ ಪಠ್ಯ ಎರಡನ್ನು ಬಳಸಿಕೊಳ್ಳುತ್ತಾರೆ. | ಅಪರಿಚಿತ ಕಥಾ ಪುಸ್ತಕಗಳನ್ನು ಓದಲು ತೊಡಗುತ್ತಾರೆ ಹಾಗೂ ಶಿಕ್ಷಕರ ಮಾರ್ಗದರ್ಶನ ಪಡೆದು ಅವುಗಳನ್ನು ಗ್ರಹಿಸುತ್ತಾರೆ | ಓದುತ್ತಾರೆ,, ಮತ್ತು ಪಾತ್ರಗಳು, ಕಥಾ-ಹಂದರ, ಕಥಾಸರಣಿ ಹಾಗೂ ಲೇಖಕರ ದೃಷ್ಟಿ ಕೋನಗಳನ್ನು ಗುರುತಿಸುತ್ತಾರೆ. |

**ಚಿತ್ರ 1: ಕಲಿಕಾ-ಮಾನದಂಡಗಳು ಕೆಳಮುಖವಾಗಿ ಸರಿಯುವುದನ್ನು ತೋರುವ ನಕ್ಷೆ**

## ಕಲಿಕಾ-ಮಾನದಂಡಗಳ ಸ್ಥಾಪನೆ

ಕಲಿಕಾ-ಮಾನದಂಡಗಳ ಸ್ಪಷ್ಟ ಅಭಿವ್ಯಕ್ತಿಯು ಎನ್ ಸಿ ಎಫ್ – ಎಫ್ ಎಸ್ ನ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ. ಸರಳವಾಗಿ ಹೇಳುವುದಾದರೆ, ಈ ಕಲಿಕಾ-ಮಾನದಂಡಗಳು ಏನನ್ನು ಬೋಧಿಸಬೇಕು ಎಂಬ ಪ್ರಶ್ನೆಗೆ ನಿರ್ದಿಷ್ಟ ಉತ್ತರ ನೀಡುವಂತಹವಾಗಿವೆ. ಪ್ರಯೋಜನಕಾರಿಯೂ, ಅನುಷ್ಠಾನ-ಯೋಗ್ಯವೂ ಆಗಿರಲು ಶಾಲಾಶಿಕ್ಷಣದ ವಿಸ್ತೃತ ಗುರಿಗಳನ್ನು ಮತ್ತು ಉದ್ದೇಶಗಳನ್ನು ಅಥವಾ ಪ್ರತಿ ಶಾಲಾ ವಿಷಯದ ನಿರ್ದಿಷ್ಟ ಗುರಿಗಳನ್ನಾಗಲಿ ಮಾತ್ರ ಹೇಳಿದರೆ ಸಾಲದು. ಈ ವಿಸ್ತೃತ ಗುರಿಗಳನ್ನು ಶೈಕ್ಷಣಿಕ ಸಾಧನೆಗಳ ಸ್ಫುಟ ಹೇಳಿಕೆಗಳಾದ ನಿರ್ದಿಷ್ಟ ಧ್ಯೇಯಗಳನ್ನಾಗಿ ಹಾಗೂ ಸಾಮರ್ಥ್ಯಗಳನ್ನಾಗಿ ಮತ್ತಷ್ಟು ಪರಿಷ್ಕರಿಸುವ ಅಗತ್ಯವಿದೆ. ನಿರೀಕ್ಷಿತ ಕಲಿಕಾ-ಸಾಧನೆಯಿಂದ ಹಿಡಿದು ಹಂತ-ಹಂತವಾಗಿ ಕೆಳಮುಖವಾಗಿ ಹರಿದು ಬರುವಲ್ಲಿ ಪ್ರತಿ ಹಂತವೂ ಮತ್ತು ಸೂಕ್ಷ್ಮ ವಿವರಗಳಿಗೆ ತೆರೆದುಕೊಂಡರೂ ತನ್ನ ಹಿಂದಿನ ಹಂತದೊಂದಿಗೆ ಸ್ಪಷ್ಟ ಸಂಬಂಧ ಹೊಂದಿರುವುದನ್ನು ಕಾಣಬಹುದಾಗಿದೆ. (ಚಿತ್ರ 1)

## ಶಾಲಾ ಶಿಕ್ಷಣದ ಗುರಿಗಳು

ತನ್ನ ಮೂಲಭೂತ ಸಾರದ ಅರ್ಥದಲ್ಲಿ, ಮೌಲ್ಯಯುತವೆಂದು ಪರಿಗಣಿತವಾದ ಜ್ಞಾನ ಹಾಗೂ ಸಾಮರ್ಥ್ಯಗಳ ಸಾಧನೆಯೇ ಶಿಕ್ಷಣ ಎನಿಸುತ್ತದೆ. ಹೀಗಾಗಿ, ಸಮಾಜವು ಕಲ್ಪಿಸಿಕೊಳ್ಳುವ ಮಾನದಂಡಗಳನ್ನು ಆಧರಿಸಿ, ಶಿಕ್ಷಣದ ಗುರಿಯು ಮಾನದಂಡಾಧಾರಿತವಾಗಿದೆ. ಭಾರತೀಯ ಸನ್ನಿವೇಶದಲ್ಲಿ ಈ ಮಾನದಂಡಾತ್ಮಕ ದಿಕ್ಕನ್ನು ನಮ್ಮ ಸಂವಿಧಾನ ಸೂಚಿಸುತ್ತದೆ.

ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಪ್ರಕಾರ, ಶಿಕ್ಷಣದ ಈ ಕಾಣ್ಕೆಯು ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ನಿರೂಪಿತವಾಗಿರುವುದರಿಂದ ಹೊಮ್ಮುತ್ತದೆ.

ಗುರಿಗಳು, ಪಠ್ಯಕ್ರಮ ಸಂಬಂಧಿತ ಧ್ಯೇಯಗಳು, ಸಾಮರ್ಥ್ಯಗಳು ಹಾಗೂ ಕಲಿಕಾ–ಫಲಿತಾಂಶಗಳು ಒಟ್ಟಾಗಿ ಸೇರಿ ಕಲಿಕಾ–ಮಾನದಂಡಗಳನ್ನು ರೂಪಿಸುತ್ತವೆ. ಕಲಿಕಾ ಮಾನದಂಡಗಳು ವಿಸ್ತೃತ ಗುರಿಗಳಿಂದ ಹಿಡಿದು ನಿರ್ದಿಷ್ಟ ಕಲಿಕಾ–ಫಲಿತಾಂಶಗಳೆಡೆಗೆ ಅಧೋಮುಖವಾಗಿ ಸಾಗುವ ಸ್ಪಷ್ಟ ಹಾಗೂ ನಿಷ್ಕೃಷ್ಟ ಪಠ್ಯಕ್ರಮ ತರ್ಕವಾಗಿದೆ. ಈ ಹಿಂದೆ ವ್ಯಕ್ತಪಡಿಸಿರುವ ತತ್ತ್ವಗಳಿಗೆ ಅನುಸಾರವಾಗಿ ಸಾಗಿದರೆ, ಈ ಕಲಿಕಾ–ಮಾನದಂಡಗಳು ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಬೆನ್ನೆಲುಬು ಎನ್ನಬಹುದು. ಇವು ಎಲ್ಲ ವೃತ್ತಿಗಾರರಿಗೂ ನಮ್ಮ ದೇಶದ ಶಾಲಾ ಶಿಕ್ಷಣವನ್ನು ಸುಧಾರಿಸಲು ಸ್ಪಷ್ಟ ಹಾಗೂ ಕರಾರುವಾಕ್ಕಾದ ನಿರ್ದೇಶನ ನೀಡುತ್ತವೆ. ಇದೊಂದು ಈ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಮೂಲಭೂತ ಕೊಡುಗೆ ಎನ್ನಬಹುದಾಗಿದ್ದು, ಹಿಂದಿನ ಪಠ್ಯಕ್ರಮ ಚೌಕಟ್ಟುಗಳಿಗಿಂತಲೂ ಉತ್ತಮ ಗುರಿಯೆಡೆಗಿನ ಸ್ಪಷ್ಟ ಗಮನವಾಗಿದೆ.

## ಪಠ್ಯಕ್ರಮಕ್ಕೆ ಸಂಬಂಧಿಸಿದ ಧ್ಯೇಯಗಳು

ಎನ್‌ಸಿಎಫ್–ಎಫ್‌ಎಸ್ ನ ಪಠ್ಯಕ್ರಮ ಧ್ಯೇಯಗಳು ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಭಾವಿಸುವ ವಿಸ್ತೃತ ಶೈಕ್ಷಣಿಕ ಗುರಿಗಳಿಂದ, ಪಂಚಕೋಶದ ತತ್ತ್ವವು ಕಲ್ಪಿಸುವ ಬೆಳವಣಿಗೆಯ ಕ್ಷೇತ್ರಗಳಿಂದೆಂತೋ, ಅಂತೆಯೇ, ಆಧುನಿಕ ಮಗುವಿನ ಬೆಳವಣಿಗೆಯ ಸಿದ್ಧಾಂತಗಳಿಂದ ಹೊಮ್ಮುತ್ತದಲ್ಲದೆ, ಇದರ ಕೇಂದ್ರ ಗಮನವು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದತ್ತ ಇದೆ. ಈ ಎನ್‌ಸಿಎಫ್–ಎಫ್‌ಎಸ್ ನ ಬೆಳವಣಿಗೆಯ ಐದು ಕ್ಷೇತ್ರಗಳನ್ನೂ ವ್ಯಾಪಿಸುವಂತೆ ಹದಿಮೂರು ಪಠ್ಯಕ್ರಮದ ಧ್ಯೇಯಗಳನ್ನು, ಸಕಾರಾತ್ಮಕ ಕಲಿಕಾ ಪ್ರವೃತ್ತಿಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನೂ ಒಳಗೊಂಡಂತೆ, ಶಿಫಾರಸು ಮಾಡುತ್ತದೆ.

## ಸಾಮರ್ಥ್ಯಗಳು

ಹದಿಮೂರು ಪಠ್ಯಕ್ರಮ ಧ್ಯೇಯಗಳ ಪ್ರತಿಯೊಂದಕ್ಕೂ 68 ನಿಷ್ಕೃಷ್ಟ ಸಾಮರ್ಥ್ಯಗಳನ್ನು ವ್ಯಾಖ್ಯಾನಿಸಲಾಗಿದೆ. ಈ ಸಾಮರ್ಥ್ಯಗಳನ್ನು ಗಮನಿಸಲು ಸಾಧ್ಯವಾಗುವಂತಿದ್ದು, ಇವು ಮೌಲ್ಯಮಾಪನ ಮಾಡಲಾಗುವಂತಹ ಶೈಕ್ಷಣಿಕ ಸಾಧನೆಗಳ ಹೇಳಿಕೆಗಳಾಗಿವೆ. ಇವೆಲ್ಲವೂ ಈ ಎನ್‌ಸಿಎಫ್–ಎಫ್‌ಎಸ್ ನಲ್ಲಿ ನಿರೂಪಿತವಾಗಿವೆ ಮತ್ತು, ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ವಿಸ್ತೃತ ಸಮುದಾಯವನ್ನೂ ಒಳಗೊಂಡಂತೆ ಎಲ್ಲಾ ಬಾಧ್ಯಸ್ಥರಿಗೂ ಗೋಚರವಾಗುವ ಶೈಕ್ಷಣಿಕ ಪ್ರಗತಿಪಥದ ಸ್ಪಷ್ಟ ಚಿತ್ರಣವೊಂದಕ್ಕೆ ಎಡೆಮಾಡುತ್ತವೆ.

## ಕಲಿಕಾ-ಫಲಿತಾಂಶಗಳು

ಕಲಿಕಾ–ಫಲಿತಾಂಶಗಳು ಸಾಮರ್ಥ್ಯಗಳ ಸಾಧನೆಯ ದಿಕ್ಕಿನಲ್ಲಿ ಕಲಿಕಾ–ಸಾಧನೆಯ "ಮಧ್ಯಂತರ ಲಕ್ಷಣ"ಗಳಾಗಿವೆ. ಈ ಕಲಿಕಾ–ಫಲಿತಾಂಶಗಳು ಬುನಾದಿ ಹಂತದ ಕೊನೆಯಲ್ಲಿ ನಿರ್ದಿಷ್ಟ ಸಾಮರ್ಥ್ಯವನ್ನು ಸಾಧಿಸುವುದು ಹೇಗೆ ಎಂಬುದರ ಕಲಿಕಾ–ಪಥವನ್ನು ಸಹ ಸೂಚಿಸುತ್ತವೆ. ವಿದ್ಯಾರ್ಥಿಗಳು ಬುನಾದಿ ಹಂತದಲ್ಲಿ ಐದು ವರ್ಷಗಳ ಶಾಲಾ–ಕಲಿಕೆಯನ್ನು ಪೂರ್ಣಗೊಳಿಸಿರುತ್ತಾರೆ. ಆದರೆ, ಸಾಮರ್ಥ್ಯಗಳು ಪ್ರತಿ ಹಂತದ ಕೊನೆಗೆ ಸಾಧಿಸಬೇಕಿರುವುದನ್ನು ನಿರೂಪಿಸುತ್ತವೆಯಾದರೂ,ಈ ಸಾಮರ್ಥ್ಯಗಳು ಹಂತದ ಕೊನೆಗೆ ಸಾಧಿತವಾಗುವಂತೆ ಪ್ರತಿ ವರ್ಷಕ್ಕೂ ಸೂಕ್ತ ಕಲಿಕಾ–ಸಾಧನೆಗಳು ಏನಿರಬೇಕೆಂಬುದರ ಬಗ್ಗೆ ಪಠ್ಯಪುಸ್ತಕಗಳನ್ನು ಅಭಿವೃದ್ಧಿಗೊಳಿಸುವವರಿಗೆ ಹಾಗೂ ಶಿಕ್ಷಕರಿಗೆ ಸ್ಪಷ್ಟ ವಿಚಾರವಿರಬೇಕಾಗುತ್ತದೆ.

ಪಠ್ಯಕ್ರಮ ಧ್ಯೇಯಗಳು ಹಾಗೂ ಸಾಮರ್ಥ್ಯಗಳು ಸಾಕಷ್ಟು ಸಾರ್ವತ್ರಿಕ ಮತ್ತು ಸದೃಢವೂ ಆಗಿದ್ದು, ಕಲಿಕಾ–ಫಲಿತಾಂಶಗಳು ಶಾಲೆಯು ವ್ಯವಹರಿಸುವ ಸನ್ನಿವೇಶಕ್ಕೆ ನಿರ್ದಿಷ್ಟವಾಗಿ ಇದ್ದರಷ್ಟೇ ಸಾಕು. ಆದ್ದರಿಂದ, ಬುನಾದಿ ಹಂತ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ನಿರೂಪಿಸಲ್ಪಟ್ಟ ಕಲಿಕಾ–ಫಲಿತಾಂಶಗಳು ತಮ್ಮ ಸ್ವರೂಪದಲ್ಲಿ ಹೆಚ್ಚು ವಿವರಣಾತ್ಮಕವಾಗಿದ್ದು, ಶಾಲಾ ವ್ಯವಸ್ಥೆಗಳು ಹಾಗೂ ಶಾಲೆಗಳು ಸನ್ನಿವೇಶಕ್ಕೆ ತಕ್ಕಂತೆ ಸಾಮರ್ಥ್ಯಗಳನ್ನು ನೆರವೇರಿಸಿಕೊಳ್ಳಲು ತಮ್ಮದೇ ಆದ ಕಲಿಕಾ–ಫಲಿತಾಂಶಗಳನ್ನು ಅಭಿವೃದ್ಧಿಗೊಳಿಸ–ಬಹುದಾಗಿದೆ.

## ಈ ದಾಖಲೆಯನ್ನು ಓದಲು ಮಾರ್ಗದರ್ಶನ

ಬುನಾದಿ ಹಂತದ ಶಿಕ್ಷಕರಿಗೆ ಈ ದಾಖಲೆಯು ಕೇವಲ ಒಂದು ಪಠ್ಯಕ್ರಮ ಚೌಕಟ್ಟನ್ನಷ್ಟೇ ನೀಡದೆ, ಕೈಪಿಡಿಯೊಂದರಂತೆ ಕೆಲಸಮಾಡಬಲ್ಲದು.

- ಕಲಿಕಾ– ಮಾನದಂಡಗಳ ಕಲ್ಪನೆಯನ್ನು ಅರ್ಥಮಾಡಿ–ಕೊಳ್ಳುವುದು ಮುಖ್ಯವಾಗುತ್ತದೆ. ಅಧ್ಯಾಯ 2 ನ್ನು ಆಮೂಲಾಗ್ರವಾಗಿ ಓದುವುದು ಶಿಕ್ಷಕರಿಗೆ ಇದನ್ನು ಸಾಧ್ಯವಾಗಿಸುವುದಷ್ಟೇ ಅಲ್ಲದೆ, ಅವರ ಪರಿಶ್ರಮವು ಯಾವ ನಿರ್ದಿಷ್ಟ ಧ್ಯೇಯಗಳು ಹಾಗೂ ಸಾಮರ್ಥ್ಯಗಳ ದಿಕ್ಕಿನಲ್ಲಿ ನಿರ್ದೇಶಿತಗೊಳ್ಳಬೇಕು ಎಂಬುದನ್ನು ತಿಳಿಸುತ್ತದೆ.

- ಅಧ್ಯಾಯ 4, 5 ಮತ್ತು 6 ಬುನಾದಿ ಹಂತದ ಶಿಕ್ಷಕರ ಕಾರ್ಯಕ್ಕೆ ನೇರವಾಗಿ ಪ್ರಸ್ತುತವಾದವು. ಈ ಅಧ್ಯಾಯಗಳಲ್ಲಿ ಸಂಗ್ರಹಿಸಲಾಗಿರುವ ತತ್ತ್ವಗಳ ಮುಖ್ಯಾಂಶಗಳ ವಾಸ್ತವಿಕ ಅರಿವನ್ನು ಪಡೆಯಲು ನಿರ್ದಿಷ್ಟೀಕೃತ ಅನುಬಂಧಗಳನ್ನು ಅವಲೋಕಿಸಲು ಶಿಕ್ಷಕರಿಗೆ ಸಹಾಯಕಾರಿಯಾಗಬಹುದು.
- ಬೆಳವಣಿಗೆ ಕುಂಠಿತವಾಗಿರುವ ಹಾಗೂ ವಿಶೇಷ ಚೇತನ

ಮಕ್ಕಳ ವಿಷಯವಾಗಿ ಪ್ರತಿಸ್ಪಂದಿಸಲು ಅಧ್ಯಾಯ 8ನ್ನು ಓದುವುದು ನಿರ್ಣಾಯಕವಾಗುತ್ತದೆ.

- ಶಿಕ್ಷಣ ಅಧಿಕಾರಿಗಳು ಹಾಗೂ ಕಾರ್ಯನಿರ್ವಾಹಕರು ಅಧ್ಯಾಯ1, 2, ಮತ್ತು 10ನ್ನು ಓದುವುದು ಅತ್ಯಾವಶ್ಯಕ.

ಈ ಬುನಾದಿ ಹಂತ – ಪಠ್ಯಕ್ರಮ ಚೌಕಟ್ಟು ಶಾಲಾ–ಕಲಿಕೆಯ ಎಲ್ಲ ಅಂಶಗಳಿಗೂ ಸ್ಪಷ್ಟ, ನಿರ್ದಿಷ್ಟ ಹಾಗೂ ಪ್ರಾಯೋಗಿಕ ಮಾರ್ಗದರ್ಶನ ಸೂತ್ರಗಳನ್ನು ದಯಪಾಲಿಸುವ ಒಂದು ಸಮಗ್ರ ದಾಖಲೆಯಾಗಿದೆ. ಈ ದಾಖಲೆಯನ್ನು ಗಮನವಿಟ್ಟು ಓದಿದರೆ ಶಿಕ್ಷಕರು ಹಾಗೂ ಇತರ ವೃತ್ತಿಗಾರರು ಇದರಿಂದ ಭಾರಿ ಪ್ರಯೋಜನ ಪಡೆಯುವುದರಲ್ಲಿ ಸಂದೇಹವಿಲ್ಲ.

### ಪರಾಮರ್ಶನ

i The Upanishadic theory of the five sheaths of a human being.

ii National Curriculum Framework for Foundational Stage. 4.5.1.5 The Four-Block Approach for Literacy Instruction. p. 116

iii National Curriculum Framework for Foundational Stage. 4.5.2.3 Blocks of Teaching for Mathematics Instruction. p. 121



**ರಾಮಚಂದರ್ ಕೃಷ್ಣಮೂರ್ತಿ** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೆ ಮುನ್ನ ಇವರು ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಲ್ಲಿ ಶಿಕ್ಷಕರ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಹಿಂದುಳಿದ ಸಮುದಾಯಗಳಿಂದ ಬರುವ ಮಕ್ಕಳಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (FLN) ವನ್ನು ಪ್ರೋತ್ಸಾಹಿಸುವುದು ಇವರ ಆಸಕ್ತಿಗಳಲ್ಲಿ ಒಂದಾಗಿದೆ. ಇವರನ್ನು ramchandar.k@azimpremjifoundation.org ಮೂಲಕ ಸಂಪರ್ಕಿಸಬಹುದು.

## ಬುನಾದಿ ಹಂತ - ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ದಾಖಲೆಯ ಸಂರಚನೆ

ಈ NCF-FS ದಾಖಲೆಯು 360 ಪುಟಗಳಷ್ಟು ಸುದೀರ್ಘವಾಗಿದ್ದು, ಇದನ್ನು ಹತ್ತು ಅಧ್ಯಾಯ ಹಾಗೂ ನಾಲ್ಕು ಅನುಬಂಧಗಳಾಗಿ ವಿಂಗಡಿಸಲಾಗಿದೆ.

### ಅಧ್ಯಾಯಗಳು

**ಅಧ್ಯಾಯ 1:** "ಪೀಠಿಕೆ ಮತ್ತು ಪರಿಚಯ"ವು ಭಾರತದಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ (ಇಸಿಸಿಇ) ಅಭಿವೃದ್ಧಿಯ ರೂಪರೇಖೆಗಳನ್ನು, ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕಾಣ್ಕೆ, ಬುನಾದಿ ಹಂತದಲ್ಲಿ ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದರ ಬಗೆಗಿನ ನಮ್ಮ ಸದ್ಯದ ತಿಳುವಳಿಕೆ ಹಾಗೂ ಭಾರತದಲ್ಲಿನ ಬುನಾದಿ ಹಂತದ ಶಾಲಾ ಕಲಿಕೆಯ ಹಿನ್ನೆಲೆಯನ್ನು ನೀಡುತ್ತದೆ. ಇದು ಪಠ್ಯಕ್ರಮ ಚೌಕಟ್ಟಿಗೆ ಸಾಂದರ್ಭಿಕತೆ ಹಾಗೂ ದೂರದೃಷ್ಟಿಗಳನ್ನು ಒದಗಿಸುತ್ತದೆ. (ಪು. 13)

**ಅಧ್ಯಾಯ 2:** "ಗುರಿಗಳು, ಪಠ್ಯಕ್ರಮದ ಧ್ಯೇಯಗಳು, ಸಾಮರ್ಥ್ಯಗಳು ಹಾಗೂ ಕಲಿಕಾ–ಫಲಿತಾಂಶಗಳು" ಎಂಬ ಈ ಅಧ್ಯಾಯವು ಇಡೀ NCF-FS ದಾಖಲೆಯ ನಿರ್ಣಾಯಕ ಅಧ್ಯಾಯವಾಗಿದ್ದು, ಇದು ಬುನಾದಿ ಹಂತದಲ್ಲಿ ಬೆಳವಣಿಗೆಯ ಎಲ್ಲ ಐದು ಕ್ಷೇತ್ರಗಳ ಕಲಿಕಾ–ಮಾನದಂಡಗಳನ್ನು ನೆಲೆಗೊಳಿಸುತ್ತದೆ. ಪಠ್ಯಕ್ರಮ ಧ್ಯೇಯಗಳು ಹಾಗೂ ಸಾಮರ್ಥ್ಯಗಳು ಒಂದು ಸಮಗ್ರ ಸಂಚಯವಾಗಿದ್ದರೂ, ಕೆಲವು ನಿದರ್ಶನಾತ್ಮಕ ಕಲಿಕಾ–ಫಲಿತಾಂಶಗಳನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. (ಪು. 49)

ತರಗತಿ ಸ್ತರಗಳಿಗೆ ಅನುಗುಣವಾದ ಕಲಿಕಾ–ಫಲಿತಾಂಶಗಳ ಸಮಗ್ರ ಸಂಚಯವು ಅನುಬಂಧ 1ರಲ್ಲಿ ದೊರೆಯುತ್ತದೆ.

**ಅಧ್ಯಾಯ 3:** "ಭಾಷಾ ಶಿಕ್ಷಣ ಮತ್ತು ಸಾಕ್ಷರತಾ ಕಾರ್ಯಕ್ರಮಕ್ಕೆ ಪ್ರವೇಶ" ಎಂಬ ಈ ಅಧ್ಯಾಯದಲ್ಲಿ ಭಾಷಾ ಶಿಕ್ಷಣದ ಒಟ್ಟಾರೆ ವಿಧಾನದ ರೂಪುರೇಖೆಗಳು ನಿರೂಪಿಸಲ್ಪಟ್ಟಿವೆ. ನಮ್ಮ ದೇಶವು ಸಮೃದ್ಧ ಭಾಷಾ ವೈವಿಧ್ಯದಿಂದ ಕೂಡಿದ್ದು, ಈ ಅಧ್ಯಾಯವು ಅದರ ಶಕ್ತಿಯನ್ನು ಗುರುತಿಸಿ, ಶಾಲೆಯಲ್ಲಿ ಯಾವಾಗ ಮತ್ತು ಹೇಗೆ ವಿಭಿನ್ನ ಭಾಷೆಗಳನ್ನು ಪರಿಚಯಿಸಬೇಕು ಎಂಬುದರ ವಿಷಯವಾಗಿ ರೂಪುರೇಖೆಗಳನ್ನು ನೀಡುತ್ತದೆ. (ಪು. 71)

**ಅಧ್ಯಾಯ 4:** ಈ ಹಂತದ ಶಾಲಾ–ಕಲಿಕೆಗೆ ಸೂಕ್ತವಾದ ನಿರ್ದಿಷ್ಟ ಬೋಧನಶೈಲಿಯ ವಿಧಾನಗಳಿಗಾಗಿ ಮಾರ್ಗದರ್ಶನ ಸೂತ್ರಗಳನ್ನು "ಬೋಧನಶೈಲಿ" ಎಂಬ ಈ ಅಧ್ಯಾಯ ನೀಡುತ್ತದೆ. ಚಿಕ್ಕ ಮಕ್ಕಳನ್ನು ತೊಡಗಿಸಿಕೊಳ್ಳುವಂತಹ ಆಟ–ಆಧಾರಿತ ವಿಧಾನಗಳು, ಅಕ್ಷರ ಮತ್ತು ಸಂಖ್ಯಾಜ್ಞಾನದ ಬೋಧನೆಗಾಗಿ ಕಾರ್ಯತಂತ್ರಗಳು ಹಾಗೂ ಶಿಕ್ಷಕರು ಮತ್ತು ಮಕ್ಕಳ ನಡುವಿನ ಸಕಾರಾತ್ಮಕ ಸಂಬಂಧಗಳ ಪಾತ್ರವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. (ಪು. 81)

**ಅಧ್ಯಾಯ 5:** "ಬೋಧನೆಗಾಗಿ ವಿಷಯದ ಆಯ್ಕೆ, ಸಂಯೋಜನೆ ಹಾಗೂ ಸಾಂದರ್ಭೀಕರಣ" ಎಂಬ ಈ ಅಧ್ಯಾಯವು ಕಲಿಕಾ–ಮಾನದಂಡಗಳನ್ನು ಸಾಧಿಸಲು ವಿಷಯವನ್ನು ಆಯ್ಕೆ ಮಾಡುವಲ್ಲಿ ಹಾಗೂ ಅದನ್ನು ಸೂಕ್ತವಾಗಿ ಬಳಸುವಲ್ಲಿ ತಲೆದೋರುವ ಸಮಸ್ಯೆಗಳೊಡನೆ ಮುಖಾಮುಖಿಯಾಗುತ್ತದೆ. ಪೂರ್ವ ಪ್ರಾಥಮಿಕ ತರಗತಿಗಳು (ವಯೋಮಾನ 3–5) ಮೂರ್ತ ವಸ್ತುಗಳು ಹಾಗೂ ವಿನೋದವಾದ ಅನುಭವಗಳ ಮೇಲೆ ಬಹುವಾಗಿ ಅವಲಂಬಿತವಾಗಿದ್ದರೆ, ಪಠ್ಯಪುಸ್ತಕಗಳ ಪಾತ್ರ 1 ಮತ್ತು 2ನೇ ತರಗತಿಯಿಂದ (ವಯೋಮಾನ 6 – 8) ತೆರೆದುಕೊಳ್ಳುತ್ತದೆ. ಭೌತಿಕ ಕಲಿಕಾ–ವಾತಾವರಣದ ಸಂಯೋಜನೆ, ತರಗತಿ ಕೊಠಡಿಗಳು ಈ ಸ್ತರಕ್ಕೆ ನಿರ್ಣಾಯಕವಾಗಿದ್ದು, ಈ ದಾಖಲೆಯು ತರಗತಿ ಕೊಠಡಿಯನ್ನು ಹೇಗೆ ಸಂಯೋಜಿಸಬೇಕು ಎಂಬುದರ ವಿಷಯವಾಗಿ ನಿರ್ದಿಷ್ಟ ಸೂಚನೆಗಳ ರೂಪುರೇಖೆಗಳನ್ನು ಪ್ರಸ್ತುತಪಡಿಸುತ್ತದೆ. (ಪು. 135)

**ಅಧ್ಯಾಯ 6:** "ಕಲಿಕಾ–ಉದ್ದೇಶಗಳ ಮುನ್ನಡೆಗಾಗಿ ಮೌಲ್ಯಮಾಪನಗಳು" ಎಂಬ ಈ ಅಧ್ಯಾಯವು ಬುನಾದಿ ಹಂತದ ಮೌಲ್ಯಮಾಪನ ವಿಧಾನಗಳನ್ನು ವಿಶದೀಕರಿಸುತ್ತದೆ. ಆರಂಭಿಕ ವರ್ಷಗಳಲ್ಲಿ ಮೌಲ್ಯಮಾಪನವು ಮಗುವಿನ ಗುಣಾತ್ಮಕ ವೀಕ್ಷಣೆಯ ಮೇಲೆ ಹೆಚ್ಚು ಅವಲಂಬಿತವಾಗಿರಬೇಕಾಗುತ್ತದೆ. ಈ ಮೌಲ್ಯಮಾಪನವು ಕೃತಿಸಂಪುಟಗಳು / ಪೋರ್ಟ್ಫೋಲಿಯೊ (portfolios) ಹಾಗೂ ಕಾರ್ಯಹಾಳೆ ಗಳಂತಹ ಹಲವು ರೀತಿಯ ವಿಧಾನಗಳನ್ನು

ಅನುಸರಿಸಬಹುದು. ಮಗುವಿನ ಬೆಳವಣಿಗೆಯ ಎಲ್ಲ ಕ್ಷೇತ್ರಗಳನ್ನೂ ಗಮನಿಸುವ ಸಮಗ್ರ ಪ್ರಗತಿ ಪತ್ರದ ಆವಶ್ಯಕತೆಗೆ ಈ ಅಧ್ಯಾಯದಲ್ಲಿ ಒತ್ತು ನೀಡಲಾಗಿದೆ. (ಪು. 169)

**ಅಧ್ಯಾಯ 7:** "ಸಮಯ ಯೋಜನೆ" ಎಂಬ ಅಧ್ಯಾಯವು ವಾರ್ಷಿಕ, ವಾರದ ಹಾಗೂ ದಿನನಿತ್ಯದ ಸಮಯ ಯೋಜನೆಗಾಗಿ ಮಾರ್ಗದರ್ಶನ ಸೂತ್ರಗಳನ್ನು ನೀಡುತ್ತದೆ. ನಿದರ್ಶನಾತ್ಮಕ ವೇಳಾಪಟ್ಟಿಗಳನ್ನು ಓದುಗರಿಗಾಗಿ ಇಲ್ಲಿ ಉಲ್ಲೇಖಿಸಲಾಗಿದೆ. (ಪು. 85).

**ಅಧ್ಯಾಯ 8:** "ಹೆಚ್ಚುವರಿ ನಿರ್ಣಾಯಕ ವಿಭಾಗಗಳು" ಎಂಬ ಅಧ್ಯಾಯವು ಈ ಹಂತಕ್ಕೆ ಪ್ರಸ್ತುತವಾದ ಎರಡು ಮೂಲಭೂತ ಕಾಳಜಿಯ ವಿಷಯಗಳನ್ನು ಪರಿಶೀಲಿಸುತ್ತದೆ. ಬೆಳವಣಿಗೆ ನಿಧಾನವಾಗಿರುವ ಹಾಗೂ ವಿಶೇಷ ಚೇತನವಿರುವ (ಕಲಿಕಾ–ನ್ಯೂನತೆಯನ್ನೂ ಒಳಗೊಂಡಂತೆ) ಸಾಧ್ಯತೆಯನ್ನು ಆರಂಭದಲ್ಲೇ ಪತ್ತೆಹಚ್ಚುವುದು ಮತ್ತು ಪರಿಹಾರ ಹುಡುಕುವುದು ಎಲ್ಲರಿಗೂ ಸಮನ್ವಯ (inclusive) ಶಿಕ್ಷಣವನ್ನು ನೀಡುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಮಗುವಿನ ಕ್ಷೇಮ ಹಾಗೂ ಸುರಕ್ಷತೆಗಳು ಸಹ ಸರ್ವೋಚ್ಚವಾಗುತ್ತವೆ. ಈ ಕಾಳಜಿಗಳೆಡೆಗೆ ಈ ಅಧ್ಯಾಯದಲ್ಲಿ ಗಮನಹರಿಸಲಾಗಿದೆ. (ಪು. 191)

**ಅಧ್ಯಾಯ 9:** "ಪೂರ್ವಸಿದ್ಧತಾ ಸ್ತರದೊಂದಿಗಿನ ಕೊಂಡಿಗಳು" ಎಂಬ ಈ ಅಧ್ಯಾಯವು ಬುನಾದಿ ಹಂತದಿಂದ ಹಿಡಿದು ಪೂರ್ವಸಿದ್ಧತಾ ಸ್ತರಕ್ಕೆ ಸಾಗುವ ಪ್ರಗತಿಪಥದ ರೂಪುರೇಖೆಗಳನ್ನು ನೀಡುತ್ತದೆ. ಪೂರ್ವಸಿದ್ಧತಾ ಸ್ತರದಲ್ಲಿ ಶಾಲಾ ವಿಷಯಗಳು ಪಠ್ಯಕ್ರಮ ಕ್ಷೇತ್ರಗಳಾಗಿ ಹೊರಹೊಮ್ಮುತ್ತವೆ. ಈ ದಾಖಲೆಯು ಬೆಳವಣಿಗೆಯ ಕ್ಷೇತ್ರಗಳಿಂದ ಈ ಶಾಲಾ ವಿಷಯಗಳೆಡೆಗಿನ ಸಂಕ್ರಮಣವು ಹೇಗಿರಬೇಕು ಎಂಬುದರ ಬಗ್ಗೆ ಸೂಚನೆಗಳನ್ನು ನೀಡುತ್ತದೆ. ಪಠ್ಯವಿಷಯ, ಬೋಧನಶೈಲಿ ಹಾಗೂ ಮೌಲ್ಯಮಾಪನಗಳನ್ನು ಕುರಿತಾಗಿ ನಿರಂತರತೆ ಹಾಗೂ ಬದಲಾವಣೆಗಳೆರಡೂ ಇರಬಹುದಾಗಿದ್ದು, ಅವು ಯಾವ ರೀತಿಯದ್ದಾಗಿರಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ. (ಪು. 203)

**ಅಧ್ಯಾಯ 10:** "ಪೋಷಕ ಪಾರಿಸಾರಿಕ ವ್ಯವಸ್ಥೆಯ ಸೃಷ್ಟಿ" ಎಂಬ ಈ ಅಧ್ಯಾಯವು ಶಾಲಾ–ಕಲಿಕೆಯ ಒಟ್ಟಾರೆ ಪಾರಿಸಾರಿಕ ವ್ಯವಸ್ಥೆಗೆ ಅಗತ್ಯವಿರುವ ಸ್ಥಿತಿಗತಿಗಳ ಬಗ್ಗೆ ಚಿಂತನೆ ನಡೆಸುವುದರ ಜೊತೆಗೆ, ಶಿಕ್ಷಕರು, ಶಾಲಾ–ವಾತಾವರಣಗಳನ್ನು ಸಜ್ಜುಗೊಳಿಸುವುದು, ಪೋಷಕರು ಮತ್ತು ಶೈಕ್ಷಣಿಕ ಅಧಿಕಾರಿಗಳ ಪಾತ್ರದ ವಿಷಯವಾಗಿ ಚರ್ಚಿಸುತ್ತದೆ. ತಂತ್ರಜ್ಞಾನವನ್ನು ಕುರಿತಾದ ಭಾಗವೊಂದು ಮಾಹಿತಿ ಮತ್ತು ಸಂವಹನಾ ತಂತ್ರಜ್ಞಾನದ ಪಾತ್ರವೇನು ಎಂಬುದನ್ನು ಪರಿಶೀಲಿಸುವುದರ ಜೊತೆಗೆ, ಇದರ ಪ್ರಯೋಜನ ಪಡೆಯುವುದರಲ್ಲಿ ಇರುವ ಸಾಧ್ಯತೆಗಳು ಹಾಗೂ ತೋರಬೇಕಿರುವ ಎಚ್ಚರಿಕೆಗಳೆರಡನ್ನೂ ಪರಿಗಣಿಸಿ ಒಂದು ಸಮತೋಲಿತ ಧೋರಣೆಯನ್ನು ವ್ಯಕ್ತಪಡಿಸುತ್ತದೆ. (ಪು. 207)
ಅನುಬಂಧಗಳು

**ಅನುಬಂಧ 1:**
ಎಲ್ಲ ಸಾಮರ್ಥ್ಯಗಳಿಗೂ ನಿದರ್ಶನಾತ್ಮಕ ಕಲಿಕಾ–ಫಲಿತಾಂಶಗಳ ವ್ಯಾಖ್ಯೆಯನ್ನು ನೀಡುತ್ತದೆ. (ಪು. 225)

**ಅನುಬಂಧ 2:**
ಬೋಧನೆ, ವಿಷಯದ ಆಯ್ಕೆ, ಮೌಲ್ಯಮಾಪನ ಹಾಗೂ ತರಗತಿ ಸಂಯೋಜನೆಗಳನ್ನು ಒಳಗೊಂಡಂಡಂತೆ ವಿಭಿನ್ನ ಕಲಾಪಗಳಿಗೆ ನಿದರ್ಶನಗಳನ್ನು ಹೊಂದಿದೆ. (ಪು. 275)

**ಅನುಬಂಧ 3:**
"ನಿಪುಣ್ ಭಾರತ"ದಲ್ಲಿ ವ್ಯಕ್ತವಾಗಿರುವ ಸಾಮರ್ಥ್ಯಗಳನ್ನು ಇಲ್ಲಿನ ಸಾಮರ್ಥ್ಯಗಳೊಂದಿಗೆ ಹೊಂದಿಸುತ್ತದೆ. (ಪು. 325)

**ಅನುಬಂಧ 4:**
ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) ಕುರಿತಾಗಿ ಭಾರತ ಹಾಗೂ ಜಗತ್ತಿನ ಇತರ ಭಾಗಗಳಲ್ಲಿ ನಡೆದಿರುವ ಸಂಶೋಧನೆಯನ್ನು ಕುರಿತಾದ ಉಲ್ಲೇಖಗಳನ್ನು ಒಳಗೊಂಡಿದೆ. (ಪು. 325)

ರಾಮಚಂದರ್ ಕೃಷ್ಣಮೂರ್ತಿ ಅವರ ಕೊಡುಗೆ



**ಅಜೀಂ ಪ್ರೇಮ್‌ಜಿ ಸ್ಕೂಲ್, ಧಮ್ತರಿ, ಛತ್ತೀಸ್ ಗಢ.** ಛಾಯಾಚಿತ್ರ ಸಹಾಯ: **ಬಾಣಿಶ್ರೀ ಮೊಹಾಪಾತ್ರ.**

---

ಅನುವಾದ: **ಕುಶಾಲ್ ಬಿ. ಎಸ್.** | ಪರಿಶೀಲನೆ: **ಲತಾ ಕೆ. ಸಿ.**